**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 1035/2016 ದಿನಾಂಕಃ 26-12-2023
ಸಿ ಡಬ್ಲೂ : 8
ಪಿ ಡಬ್ಲೂ : 4

---

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | |
|---|---|
| ಸಾಕ್ಷಿದಾರನ ಹೆಸರು | ಪಾರ್ವತಿ ಬಸಪ್ಪಾ ಚೋಗಲಾ |
| ಗಂಡ/ ತಂದೆಯ ಹೆಸರು | ಬಸಪ್ಪಾ |
| ವಯಸ್ಸು | 50 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಸಾಃ ದರೂರ ತಾಃ ಅಥಣಿ |

:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು :

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ

ಚಾಸಾ 1 ರವರು ನನ್ನ ಮಗ. ಚಾಸಾ 6 ಮತ್ತು 7 ರವರ ಪರಿಚಯ ಇರುತ್ತದೆ. ಚಾಸಾ 9 ರವರ ಪರಿಚಯ ಇರುವದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ಮೃತ ಬಸಪ್ಪಾ ನನ್ನ ಗಂಡ. ಮೃತ ಬಸಪ್ಪಾ ದಿನಾಂಕಃ 13-08-2015 ರಂದು ಅಥಣಿಗೆ ಹೋಗಿ ಬರುತ್ತೇನೆ ಎಂದು ಮದ್ಯಾಹ್ನ 12 ಗಂಟೆಗೆ ತನ್ನ ಮೋಟಾರ ಸೈಕಲ ಮೇಲೆ ಹೋಗಿರುತ್ತಾರೆ. ಆ ನಂತರ 2 ಗಂಟೆ ಸುಮಾರಿಗೆ ಚಾಸಾ 6 ರವರು ಚಾಸಾ 1 ರವರಿಗೆ ಫೋನ ಮಾಡಿ ನನ್ನ ಗಂಡನಿಗೆ ಅಪಘಾತ ಆದ ವಿಷಯ ತಿಳಿಸಿರುತ್ತಾರೆ. ಸದರಿ ಅಪಘಾತ ಚೌಗಲಾ ಆಸ್ಪತ್ರೆಯ ಎದುರುಗಡೆ ಆಗಿದೆ ಎಂದ ತಿಳಿಸಿರುತ್ತಾರೆ. ಆ ನಂತರ ನಾನು ಮತ್ತು ಚಾಸಾ 1 ರವರು ಅಥಣಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಹೋಗಿ ನೋಡುವಾಗಲೇ ನನ್ನ ಗಂಡ ತೀರಿಕೊಂಡಿದ್ದರು. ಅಪಘಾತದ ಬಗ್ಗೆ ಚಾಸಾ 6 ರವರಿಂದ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇವೆ. ಚಾಸಾ 6 ರವರು ನನ್ನ ಗಂಡನಿಗೆ ಮೋಟರ ಸೈಕಲ ಹಾದು ಅಪಘಾತ ಆಗಿದೆ ಎಂದು ತಿಳಿಸಿರುತ್ತಾರೆ. ನನ್ನ ಗಂಡನಿಗೆ ಹಾಯಿಸಿದ ಮೋಟಾರ ಸೈಕಲ ನಂ. ಕೆಎ 23 ಬಿ 5859 ಆಗಿರುತ್ತದೆ. ನನ್ನ ಗಂಡ ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂಬರ ಕೆ ಎ 23 9113 ಆಗಿರುತ್ತದೆ. ಸದರಿ ಅಪಘಾತ ಆರೋಪಿತನ ತಪ್ಪಿನಿಂದ ಆಗಿದೆ. ಅಪಘಾತದಲ್ಲಿ ಮೃತ ಬಸಪ್ಪಾ ಇವರಿಗೆ ತಲೆಗೆ ಪೆಟ್ಟಾಗಿರುತ್ತದೆ. ಅಪಘಾತದ ನಂತರ ಚಾಸಾ 6 ರವರು ಅಂಬ್ಯುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿ ಅಪಘಾತದಲ್ಲಿ ಆರೋಪಿತನಿಗೂ ಸಹ ಪೆಟ್ಟಾಗಿರುತ್ತದೆ. ಆರೋಪಿತನನ್ನು ನೋಡಿದರೆ ಗುರುತಿಸಲು ಆಗುವದಿಲ್ಲ. ಮೃತ ಬಸಪ್ಪಾ ಇವರಿಗೆ ವೈದ್ಯರ ಹೇಳಿಕೆಯಂತೆ ಹೆಚ್ಚಿ ನ ಚಿಕಿತ್ಸೆಗೆ

ಮಿರಜಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ನಾಯಕ ಆಸ್ಪತ್ರೆಯ ಬಳಿ ತೀರಿಕೊಂಡಿರುತ್ತಾರೆ. ಪಿರ್ಯಾದಿಯನ್ನು ಚಾಸಾ 1 ರವರು ನೀಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. ಕೆ ಹೆಚ ಎ ವಕೀಲರಿಂದಃ

ನಾನು ಶಾಲೆಗೆ ಹೋಗಿರುವದಿಲ್ಲ. ಚಾಸಾ 1 ರವರು ನೀಡಿರುವ ಪಿರ್ಯಾದಿಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಅವರು ಕೇಸ ಹಾಕಿರುತ್ತೇನೆ ಎಂದು ತಿಳಿಸಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅಪಘಾತ ಆದಾಗ ನಾನು ಸ್ಥಳದಲ್ಲಿ ಇರಲಿಲ್ಲ. ಚಾಸಾ 6 ರವರು ನಮ್ಮ ಊರಿನವರು ಎಂದರೆ ಸರಿ. ನನ್ನ ಗಂಡ ವಾಹನ ಚಲಾಯಿಸುವ ಲೈಸನ್ಸ ಇದ್ದ ಬಗ್ಗೆ ನಾನು ನೋಡಿರುವದಿಲ್ಲ. ನನ್ನ ಗಂಡ ಮನೆಯಿಂದ ಹೋಗುವಾಗ ನಾನು ಅವರನ್ನು ನೋಡಿರುತ್ತೇನೆ. ನನ್ನ ಗಂಡ ಹೋಗುವಾಗ ಯಾವುದೇ ಹೆಲ್ಮೆಟ್ ಹಾಕಿರುವದಿಲ್ಲ. ಅಪಘಾತ ಆಗುವ ಸಮಯದಲ್ಲಿ ನನ್ನ ಗಂಡನಿಗೆ 70 ಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಎಂದರೆ ಸಾಕ್ಷಿ 50 ವರ್ಷ ಆಗಿರಬಹುದು ಎಂದು ಹೇಳುತ್ತಾರೆ. ಚೌಗಲಾ ಆಸ್ಪತ್ರೆಯಲ್ಲಿ ಸಹ ಅಪಘಾತಕ್ಕೆ ಈಡಾದ ಗಾಯಾಳುಗಳನ್ನು ಉಪಚರಿಸುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚೌಗಲಾ ಆಸ್ಪತ್ರೆ ಬಳಿ ಒಂದು ಅಂಬೇಡ್ಕರ ಸರ್ಕಲಗೆ ಹೋಗುವ ರಸ್ತೆ ಬರುತ್ತದೆ, ಇನ್ನೊಂದು ಹಳಿಯಾಳ ಸರ್ಕಲಗೆ ಹೋಗುವ ರಸ್ತೆ ಬರುತ್ತದೆ. ಮೃತ ಬಸಪ್ಪಾ ಇವರಿಗೆ 70 ಕ್ಕಿಂತ ಹೆಚ್ಚು ವಯಸಾದ್ದ ಕಾರಣ ಅವರು ಸ್ವತಃ ರಸ್ತೆಯ ಡಿವ್ಯಾಂಡರಗೆ ಹಾಯಿಸಿಕೊಂಡು ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಡಿವ್ಯಾಂಡರಗೆ ತಲೆಗೆ ಬಡಿದ ಕಾರಣ ಅವರು ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ಪರಿಹಾರ ಕೇಳಿ ಒಂದು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಪರಿಹಾರ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಆರೋಪಿತನ ವಿರುದ್ಧ ಖೊಟ್ಟಿ ಪಿರ್ಯಾದಿ ಸಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಚಲನ ಪ್ರಮಾಣ ಪತ್ರ ಇಲ್ಲದ ಕಾರಣ ಪರಿಹಾರ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.